## ಸರ್ಕಾರಿ ಪ್ರೌಢಶಾಲೆ (RMSA), ತೊರಲಕ್ಕಿ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ - 563 137

## ಅಧ್ಯಾಯ-2: ಆಮ್ಲಗಳು, ಪ್ರತ್ಯಾಮ್ಲಗಳು ಮತ್ತು ಲವಣಗಳು

1) ನಮ್ಮ ಜಠರದಲ್ಲಿ ಸ್ವಾಭಾವಿಕವಾಗಿ ಉತ್ಪತ್ತಿಯಾಗುವ ಆಮ್ಲ :

(a) ಅಸಿಟಿಕ್ ಆಮ್ಲ (b) ಸಿಟ್ರಿಕ್ ಆಮ್ಲ (c) ಹೈಡ್ರೋಕ್ಲೋರಿಕ್ ಆಮ್ಲ (d) ಸಲ್ಫ್ಯೂರಿಕ್ ಆಮ್ಲ

2) ಜೇನು ಕಡಿತದ ನೋವು ಮತ್ತು ಉರಿಯನ್ನು ಇದರಿಂದ ಉಪಶಮನಗೊಳಿಸಬಹುದು :

(a) ವಿನೆಗರ್ (b) ಅಡುಗೆ ಸೋಡಾ (c) ಮೊಸರು (d) ನಿಂಬೆ ರಸ

3) ಸತುವಿನ ಚೂರು ಹೈಡ್ರೋಕ್ಲೋರಿಕ್ ಆಮ್ಲದೊಂದಿಗೆ ವರ್ತಿಸಿದಾಗ ಬಿಡುಗಡೆಯಾಗುವ ಅನಿಲ :

(a) ನೈಟ್ರೋಜನ್ (b) ಕಾರ್ಬನ್ ಡೈಆಕ್ಸೈಡ್ (c) ಹೈಡ್ರೋಜನ್ (d) ಆಕ್ಸಿಜನ್

4) ಇವುಗಳಲ್ಲಿ ಯಾವುದು ಆಮ್ಲಗಳ ಗುಣವಲ್ಲ?

(a) ಹುಳಿ ರುಚಿ ಹೊಂದಿವೆ

(b) ಲಿಟ್ಮಸ್ ಕಾಗದವನ್ನು ಕೆಂಪು ಬಣ್ಣಕ್ಕೆ ತಿರುಗಿಸುತ್ತವೆ

(c) pH ಮೌಲ್ಯವು 7 ಕ್ಕಿಂತ ಕಡಿಮೆ ಇರುತ್ತದೆ

(d) ನೀರಿನಲ್ಲಿ ಹೈಡ್ರಾಕ್ಸೈಡ್ (OH-) ಅಯಾನ್‌ಗಳನ್ನು ಉಂಟುಮಾಡುತ್ತವೆ

5) A, B, C ಮತ್ತು D ದ್ರಾವಣಗಳ pH ಮೌಲ್ಯವು ಕ್ರಮವಾಗಿ 2, 4, 7 ಮತ್ತು 10. ಇವುಗಳಲ್ಲಿ H+ ಅಯಾನುಗಳ ಸಾರತೆ ಹೆಚ್ಚಿರುವುದು :

(a) A ದ್ರಾವಣ (b) B ದ್ರಾವಣ (c) C ದ್ರಾವಣ (d) D ದ್ರಾವಣ

6) ಇವುಗಳಲ್ಲಿ ಹೆಚ್ಚು ಹೈಡ್ರಾಕ್ಸಿಲ್ (OH-) ಅಯಾನುಗಳನ್ನು ಉಂಟುಮಾಡುವ ಸಂಯುಕ್ತ :

(a) ಸೋಡಿಯಂ ಹೈಡ್ರಾಕ್ಸೈಡ್ (b) ಅಸಿಟಿಕ್ ಆಮ್ಲ (c) ಅಮೋನಿಯಂ ಹೈಡ್ರಾಕ್ಸೈಡ್ (d) ಎಲ್ಲವೂ

7) ಒಂದು ಬೀಕರ್‌ನಲ್ಲಿ CuO ತೆಗೆದುಕೊಂಡು ಅದಕ್ಕೆ ನಿಧಾನವಾಗಿ ಸಾರರಿಕ್ತ HCl ನ್ನು ಸೇರಿಸುತ್ತಾ ಕಲಕಿದಾಗ ದ್ರಾವಣವು ನೀಲಿ-ಹಸಿರು ಬಣ್ಣಕ್ಕೆ ತಿರುಗುತ್ತದೆ. ಇದಕ್ಕೆ ಕಾರಣ ಈ ಕ್ರಿಯೆಯಲ್ಲಿ ಉಂಟಾಗುವ :

(a) ತಾಮ್ರದ ಸಲ್ಫೇಟ್ (b) ತಾಮ್ರದ ಕ್ಲೋರೈಡ್ (c) ಹೈಡ್ರಾಕ್ಸಿಲ್ ಅಯಾನ್ (d) ಹೈಡ್ರೋನಿಯಮ್ ಅಯಾನ್

8) ನೈದಿಲೆ ಸಸ್ಯದ ಆರೋಗ್ಯಕರ ಬೆಳವಣಿಗೆಗೆ ಮಣ್ಣಿನ pH ಮೌಲ್ಯವು 6.0 ರಿಂದ 6.5 ರ ವ್ಯಾಪ್ತಿಯ ಅಗತ್ಯವಿದೆ. ಒಂದು ತೋಟದ ಮಣ್ಣಿನ pH 4.5 ಆಗಿದ್ದರೆ, ನೈದಿಲೆ ಸಸ್ಯಗಳನ್ನು ಬೆಳೆಯಲು ಈ ಕೆಳಗಿನ ಯಾವುದನ್ನು ಮಣ್ಣಿಗೆ ಸೇರಿಸಲು ಸಲಹೆ ನೀಡುವಿರಿ ?

(a) ಉಪ್ಪು (b) ಸುಣ್ಣ (c) ಮರಳು (d) ಗೊಬ್ಬರ

9) ಹಲ್ಲಿನ ಎನಾಮೆಲ್‌ನಲ್ಲಿರುವ ಕ್ಯಾಲ್ಸಿಯಂ ಫಾಸ್ಫೇಟ್‌ನ ಗುಣ :

(a) ಆಮ್ಲೀಯ (b) ಪ್ರತ್ಯಾಮ್ಲೀಯ (c) ಉಭಯವರ್ತಿ (d) ತಟಸ್ಥ

10) ಜಲೀಯ ದ್ರಾವಣದಲ್ಲಿ ಅಪೂರ್ಣವಾಗಿ ವಿಯೋಜನೆ ಹೊಂದುವ ಸಂಯುಕ್ತಗಳ ಗುಂಪು :

(a) ತಾಮ್ರದ ಸಲ್ಫೇಟ್ ದ್ರಾವಣ, ಸಕ್ಕರೆ ದ್ರಾವಣ

(b) ಹೈಡ್ರೋಕ್ಲೋರಿಕ್ ಆಮ್ಲ, ನೈಟ್ರಿಕ್ ಆಮ್ಲ

(c) ಹೈಡ್ರೋಕ್ಲೋರಿಕ್ ಆಮ್ಲ, ಫಾಸ್ಫಾರಿಕ್ ಆಮ್ಲ

(d) ಕಾರ್ಬಾನಿಕ್ ಆಮ್ಲ, ಫಾಸ್ಫಾರಿಕ್ ಆಮ್ಲ

LIVEWORKSHEETS